# ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಯ – ಯೋಜನೆ

1. **ಮಾರಾಟ ಮಳಿಗೆಯ ಸ್ಥಳ ಹಾಗೂ ಪುಸ್ತಕ ಮಾರಾಟ ಪ್ರತಿನಿಧಿಯ ಆಯ್ಕೆ ಪ್ರಕ್ರಿಯೆ:**

(ಅ) ರಾಜ್ಯದಾದ್ಯಂತ ಪತ್ರಿಕಾ ಪ್ರಕಟಣೆ ನೀಡುವ ಮೂಲಕ ಸೂಕ್ತ ಮಾರಾಟ ಮಳಿಗೆಯ ಸ್ಥಳ ಹಾಗೂ ವ್ಯಕ್ತಿ ಆಯ್ಕೆ ಮಾಡುವುದು.

(ಆ) ಮಾನ್ಯ ಶಾಸಕರು, ಸಚಿವರುಗಳು, ಸಂಸದರು, ಜಿಲ್ಲಾ ಪಂಚಾಯತ್ ಹಾಗೂ ಸಂಘ ಸಂಸ್ಥೆಗಳ ನೆರವಿನೊಂದಿಗೆ ನಂದಿನಿ ಬೂತ್ ಮಾದರಿಯ ಮಳಿಗೆ ಸ್ಥಾಪನೆ.

(ಇ) ಕೊಡುಗೆ ನೀಡಿದವರ ಹೆಸರನ್ನು ನಾಮ ಫಲಕದ ಕೊನೆಯಲ್ಲಿ ..................................ರವರ ಕೊಡುಗೆ ಎಂದು ನಮೂದಿಸುವುದು.

(ಖ) ಜನಸಂದಣಿ ಇರುವ ಪ್ರದೇಶ, ಪುಸ್ತಕಗಳು ಮಾರಾಟವಾಗುವ ಸೂಕ್ತ ಸ್ಥಳವಾಗಿದ್ದು, ಅತಿ ಕಡಿಮೆ ದರದಲ್ಲಿ ಬಾಡಿಗೆ ಮಳಿಗೆಯು ಲಭ್ಯವಾಗುವ ಸ್ಥಳಗಳಲ್ಲಿ ಪ್ರಾಧಿಕಾರದ ಹಣಕಾಸಿನ ಲಭ್ಯತೆಯನ್ನಾಧರಿಸಿ, ಮಳಿಗೆಯನ್ನು ತೆರೆಯತಕ್ಕದ್ದು, ಸ್ಥಳದ ಆಯ್ಕೆ ಬಗ್ಗೆ ಅಂತಿಮವಾಗಿ ಪ್ರಾಧಿಕಾರವು ನಿರ್ಣಯಿಸುತ್ತದೆ.

2. **ಮಾರಾಟ ಮಳಿಗೆಯ ನಾಮಫಲಕ :**

ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಯ ಮುಂಭಾಗದಲ್ಲಿ ಈ ಕೆಳಕಂಡಂತೆ ನಾಮಫಲಕವನ್ನು ಪ್ರದರ್ಶಿಸತಕ್ಕದ್ದು.

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
"ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆ"
..................................(ಸ್ಥಳದ ಹೆಸರು)
..........................................................
.......................................................
ರವರ ಕೊಡುಗೆ (ಕೊಡುಗೆಯಿದ್ದಲ್ಲಿ ಮಾತ್ರ)

3. **ಮಾರಾಟ ಪ್ರತಿನಿಧಿ (ಏಜನ್ಸಿ)ಯ ನೇಮಕಾತಿ:**

**ಅರ್ಹತೆ:** (ಅ) ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು.
(ಆ) ಗ್ರಂಥಾಲಯ ವಿಜ್ಞಾನ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು.
(ಇ) ಅಂಗೀಕೃತ ವಿಶ್ವವಿದ್ಯಾಲಯದ ಯಾವುದೇ ಪದವೀಧರರಿಗೂ ನಿಯಮಾನುಸಾರ ನೇಮಕಾತಿಗೆ ಅಗತ್ಯಕ್ಕೆ ಅನುಗುಣವಾಗಿ ಅವಕಾಶವಿರುತ್ತದೆ.

4. **ಏಜೆನ್ಸಿಯ ಕಾರ್ಯಗಳು :**

(ಅ) ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಯ ಕಾರ್ಯವೇಳೆ ಬೆಳಿಗ್ಗೆ 11.00 ರಿಂದ ರಾತ್ರಿ 8.00ಗಂಟೆಯ ವರೆಗೆ ಇರುತ್ತದೆ.

(ಆ) ರಜಾ ದಿನಗಳಲ್ಲಿ ಸಹ ಮಳಿಗೆಯು ಪುಸ್ತಕ ಮಾರಾಟಕ್ಕೆ ತೆರೆದಿರುತ್ತದೆ.

(ಇ) ಪ್ರಾಧಿಕಾರದಿಂದ ಕಾಲಕಾಲಕ್ಕೆ ಮುದ್ರಿಸಿ, ಹೊರತರಲಾಗುವ ಪುಸ್ತಕಗಳ ಲಭ್ಯತೆಯ ವಿವರಗಳನ್ನು ಸ್ಥಳೀಯ ವಾರ್ತಾಧಿಕಾರಿಯವರ ಸಹಾಯದಿಂದ ಸ್ಥಳೀಯ ಪತ್ರಿಕೆಗಳ ಮೂಲಕ ಸಾಧ್ಯವಾದಲ್ಲಿ, ಮುದ್ದಾಂ ಆಗಿ ಸಾಹಿತಿ, ವಿದ್ವಾಂಸರಿಗೆ, ಶಾಲಾ– ಕಾಲೇಜುಗಳಿಗೆ ನೀಡತಕ್ಕದ್ದು.

(ಈ) ಪ್ರಾಧಿಕಾರವು ಲಿಖಿತವಾಗಿ ಸೂಚಿಸುವ ಇತರೆ ಕೆಲಸಗಳು.
ಉದಾ: ಆ ಜಿಲ್ಲೆಯ ಪುಸ್ತಕ ಪ್ರೇಮಿ ಬಳಗದ ಕಾರ್ಯ ಚಟುವಟಿಕೆಗಳ ಸಂಚಾಲಕನಾಗಿ ಮಾಸಿಕ ಸಾಂಸ್ಕೃತಿಕ ಸಾಹಿತ್ಯ ಚಟುವಟಿಕೆಗಳ ಸಂಘಟಕನಾಗಿಯೂ ಕೆಲಸ ನಿರ್ವಹಿಸುವುದು. ಅದರಂತೆ ಇತ್ಯಾದಿ ಕೆಲಸಗಳು.

5. **ಏಜೆನ್ಸಿಯ ಅವಧಿ :**

(ಅ) ಏಜೆನ್ಸಿಯ ಅವಧಿಯು ಮೂರು ವರ್ಷಗಳಾಗಿರುತ್ತದೆ.

(ಆ) ಏಜೆನ್ಸಿಯ ನಂತರದ ಅವಧಿಗೆ ಮುಂದುವರೆಯಲು ಇಚ್ಛಿಸಿದಲ್ಲಿ, ಏಜೆನ್ಸಿಯು ನವೀಕರಣಕ್ಕಾಗಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸತಕ್ಕದ್ದು.

(ಇ) ಏಜೆನ್ಸಿಯು ಈ ಮುಂಚಿನ ಅವಧಿಯಲ್ಲಿ ಸಲ್ಲಿಸಿದ ಕೆಲಸ ಕಾರ್ಯಗಳನ್ನಾಧರಿಸಿ, ಏಜೆನ್ಸಿಯ ನವೀಕರಣಕ್ಕೆ ಸೂಕ್ತ ನಿರ್ಣಯವನ್ನು ಪ್ರಾಧಿಕಾರವು ತೆಗೆದುಕೊಳ್ಳುತ್ತದೆ.

6. **ಏಜೆನ್ಸಿಯ ರದ್ಧತಿ :**

(ಅ) ಪ್ರಾಧಿಕಾರವು ನೀಡುವ ಪುಸ್ತಕಗಳ ಮಾರಾಟದ ಲೆಕ್ಕಪತ್ರಗಳ ವಿವರಗಳನ್ನು ಪ್ರತಿ ತಿಂಗಳ 5ನೇ ದಿನಾಂಕದೊಳಗೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಪ್ರಾಧಿಕಾರದ ಪುಸ್ತಕಗಳ ಮಾರಾಟದಿಂದ ಬಂದ ಹಣವನ್ನು ಪ್ರತಿನಿತ್ಯವೂ ಪ್ರಾಧಿಕಾರದ ಹೆಸರಿನಲ್ಲಿ ಆರಂಭಿಸಿರುವ ಸ್ಥಳೀಯ ಬ್ಯಾಂಕ್ ಖಾತೆಗೆ ಜಮೆ ಮಾಡತಕ್ಕದ್ದು. ಏಜೆನ್ಸಿಯು ಗರಿಷ್ಠ ಮೂರು ತಿಂಗಳ ಅಂತರದೊಳಗೆ ದೈನಂದಿನ ಪುಸ್ತಕ ಮಾರಾಟದ ಹಣವನ್ನು ಜಮೆ ಮಾಡುವಲ್ಲಿ ವಿಫಲನಾದಲ್ಲಿ ಹಾಗೂ

...........2